## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| ಸಾಕ್ಷಿದಾರರ ಹೆಸರು | : ತೇಜಶ್ರೀ ಎಸ್ | ಪಿಡಬ್ಲ್ಯೂ ಃ 27 |
| ತಂದೆಯ / ಗಂಡನ ಹೆಸರು | : ಮುಕುಂದರಾಜು | ಸಿಡಬ್ಲ್ಯೂ ಃ 50 |
| ವಯಸ್ಸು | : 61 | |
| ಉದ್ಯೋಗ | : ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | |
| ವಾಸಸ್ಥಳ | : ಸಿದಾರ್ಥ ಲೇಔಟ್ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 11.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು 04.02.2011 ರಿಂದ 30.06.2024 ರವರೆಗೆ ನಾನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಕರ್ನಾಟಕ ಕೊಳಗೇರಿ ಅಬಿವೃದ್ದಿ ಮಂಡಳಿ , ಉಪ ವಿಭಾಗ ಮೈಸೂರು ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.21.04.2021 ರಂದು ನರಸಿಂಹರಾಜ ಪೊಲೀಸರಿಂದ ನನಗೆ ಕೋರಿಕೆ ಪತ್ರ ಬಂದಿದ್ದು , ಅದರ ಪ್ರಕಾರ , ಮನೆ ನಂಬರ್ 50 , ಕೆಸರೆ ಕುರಿಮಂಡಿ, ಮೈಸೂರು ಯಾರಿಗೆ ಹಂಚಿಕೆಯಾಗಿರುತ್ತದೆ ಎಂಬುದರ ಬಗೆಗ ಮಾಹಿತಿಯನ್ನು ಕೋರಿರುತ್ತಾರೆ.

3. ದಿ.04.09.2021 ರಂದು ಸದರಿ ಮನೆ ನಂಬರ್ 50 ಕೆಸರೆ ಕುರಿಮಂಡಿ, ಮೈಸೂರುನ್ನು ಶ್ರೀ ರಾಜಗೋಪಾಲ್ ಬಿನ್ ಮುತ್ತಸ್ವಾಮಿಯವರಿಗೆ ಹಂಚಿಕೆ ಮಾಡಲಾಗಿರುತ್ತದೆ ಎಂದು ಮಾಹಿತಿಯನ್ನು ಪತ್ರದ ಮುಖಾಂತರ ನೀಡಿರುತ್ತೇನೆ. ಸದರಿ ಮಾಹಿತಿಯನ್ನು ನಮ್ಮ ಕಚೇರಿಯ ದಾಖಲೆಗಳ ಆಧಾರದ ಮೇಲೆ ನೀಡಿರುತ್ತೇನೆ. ಸಾಕ್ಷಿಯೂ ದಿ.04.09.2021 ರ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ಪತ್ರವನ್ನು ನಿಪಿ.68 ಎಂದು, ಸಾಕ್ಷಿಯ ಸಹಿಯನ್ನು ನಿಪಿ.68(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**(ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲವಾಕಾಶ ಕೇಳಿದ್ದು, ಕಾಲಾಕವಕಾಶ ನೀಡಿದ್ದು, ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.